9.	ಬೆಳ್ತಂಗಡಿ	1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ	25.00	ರಾಜ್ಯ ಹೆದ್ದಾರಿ
		2. ಬೆಳ್ತಂಗಡಿ ಕಿಲ್ಲೂರು ರಸ್ತೆ	16.00	ಮುಖ್ಯ ಜಿಲ್ಲಾ ರಸ್ತೆ
		3. ವೇಣೂರು ಅಂದಿಂಜ ನಾರಾವಿ ರಸ್ತೆ	15.50	ಮುಖ್ಯ ಜಿಲ್ಲಾ ರಸ್ತೆ
10.	ಕುಂದಾಪುರ	1. ಬ್ರಹ್ಮಾವರ ಜನ್ನಾಡಿ ರಸ್ತೆ	9.70	ಮುಖ್ಯ ಜಿಲ್ಲಾ ರಸ್ತೆ
		2. ಹಾಲಾಡಿ ಅಮಾಸ್‌ಬೈಲು ರಸ್ತೆ	13.00	ಮುಖ್ಯ ಜಿಲ್ಲಾ ರಸ್ತೆ
		3. ಕೋಟಗೋಳಿಯಂಗಡಿ ರಸ್ತೆ	16.40	ಮುಖ್ಯ ಜಿಲ್ಲಾ ರಸ್ತೆ
	ಒಟ್ಟು ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದ			203.70 ಕಿ.ಮೀ.
	ಒಟ್ಟು ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದ			83.30 ಕಿ.ಮೀ.
	ಒಟ್ಟು			**287.00 ಕಿ.ಮೀ.**

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತಿಗಳಿಗೆ ನಾಮ ನಿರ್ದೇಶನ ಮಾಡುವ ಬಗ್ಗೆ.

1075 (1451) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ಆಡಳಿತಾಧಿಕಾರಿಯವರಿಗೆ ಸಲಹೆ ಸೂಚನೆ ಕೊಡಲು ಸದಸ್ಯರ ನಾಮ ನಿರ್ದೇಶನ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು ;

ಇ) ಹಾಗಿಲ್ಲದಿದ್ದಲ್ಲಿ ಇವುಗಳಲ್ಲಿ ನಡೆಯುವ ಅವ್ಯವಹಾರವನ್ನು ತಡೆಯಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಕಂದಾಯ ಸಚಿವರು) :

ಅ) ಪರಿಶೀಲಿಸಲಾಗುವುದು.

ಆ) ಪರಿಶೀಲಿಸಲಾಗುವುದು.

ಇ) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಕಾಯ್ದೆಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಮುಳಬಾಗಿಲು ತಾಲ್ಲೂಕಿನ ನಾಚಾಂಕಳ್ಳಿ ಫೀಡರ್ ಚಾನಲ್ ಬಗ್ಗೆ :

1077 (1662) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಣ್ಣನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ದುಗ್ಗ ಸಂದ್ರ ಮತ್ತು ಬೈರಕೂರ್ ಹೋಬಳಿಗಳಲ್ಲಿ ಬರುವ ಅನೇಕ ಹಳ್ಳಿಗಳಿಗೆ ಅನುಕೂಲವಾಗುವಂತೆ ನಾಚಂಕಳ್ಳಿ ಫೀಡರ್ ಚಾನಲ್ ತೆಗೆಯಬೇಕೆಂದು ಅಲ್ಲಿಯ ಜನತೆಯ ಬೇಡಿಕೆ ಇದೆಯೇ ;

ಅ) ಹಾಗಿದ್ದಲ್ಲಿ ಒಟ್ಟು ಎಷ್ಟು ಹಳ್ಳಿಗಳಿಗೆ ಅನುಕೂಲವಾಗುತ್ತದೆ ಮತ್ತು ಹಳ್ಳಿಗಳ ಹೆಸರುಗಳೇನು ;

ಇ) ಅದರಿಂದ ಅಂದಾಜು ಎಷ್ಟು ಎಕರೆ ಖುಷ್ಕಿ. ಬಾಗಾಯತ್ತು. ತರಿ ಜಮೀನಿಗೆ ನೀರು ಹಾಯಿಸಬಹುದು ;

ಈ) ಸದರಿ ಕಾಲುವೆಯನ್ನು ತೋಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ;

ಉ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು ;

ಊ) ಈ ವರ್ಷದ ಬಡ್ಜೆಟ್ ಪಣ ಮಂಜೂರು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇದೆ.

ಆ) ಒಟ್ಟು 9 ಹಳ್ಳಿಗಳಿಗೆ ಅನುಕೂಲವಾಗುತ್ತದೆ. ಆ ಹಳ್ಳಿಗಳಿಗೆ - ಹೆಸರು ಕೆಳಗಿನಂತಿದೆ.

1) ಕಲ್ಲುರಸನಹಳ್ಳಿ
2) ಕೋಡಿಹಳ್ಳಿ
3) ವಡ್ಡರಳ್ಳಿ
4) ಕಂಬದಿನ್ನೆ
5) ರಾಜೇನಹಳ್ಳಿ
6) ಗುಂಡ್ಲಹಳ್ಳಿ
7) ಕಾಡೇನಹಳ್ಳಿ
8) ಮುಷ್ಟೂರು
9) ಬ್ಯಾಟನೂರು

ಇ) ಹಾಲಿ ಇರುವ ಸುಮಾರು 852 ಎಕರೆ ಆಚ್ಚುಕಟ್ಟಿಗೆ ನೀರಾವರಿ ಸೌಲಭ್ಯವನ್ನು ಉತ್ತಮಪಡಿಸಬಹುದು

ಈ) ಸದರಿ ಪ್ರಸ್ತಾವನೆಯು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಕಾರ್ಯಸಾಧುವಾಗದ ಕಾರಣ ಇದನ್ನು ಕೈಬಿಡಲಾಗಿದೆ.

ಉ) ಪ್ರಾಥಮಿಕ ಅನ್ವೇಷಣ ವರದಿ ಪ್ರಕಾರ ಈ ಯೋಜನೆಯ ಅಂದಾಜು ವೆಚ್ಚ 136.00 ಲಕ್ಷಗಳು

ಊ) (ಈ)ಗೆ ನೀಡಿರುವ ಉತ್ತರದಂತೆ ಅನ್ವಯಿಸುವುದಿಲ್ಲ.